ಓ ಎಸ್ ನಂ.247/2013
ಪಿಡಬ್ಲ್ಯು. 1

ಪ್ರಮಾಣ ವಚನ ಬೋಧಿಸಿದ ದಿನಾಂಕಃ **02.07.2024**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ ಹೆಚ್ ಎಂ ಎಂ ವಕೀಲರಿಂದಃ-

ದಿನಾಂಕಃ **12.04.1984** ರ ನೊಂದಾಯಿತ ಕ್ರಯ ಪತ್ರವನ್ನು ನಿಪಿ **11** ಎಂದು, ದಿನಾಂಕಃ **06.07.1987** ರ ನೊಂದಾಯಿತ ಕ್ರಯ ಪತ್ರವನ್ನು ನಿಪಿ **12** ಎಂದು, ದಿನಾಂಕಃ **20.02.2008** ರ ನೊಂದಾಯಿತ ವಿಭಾಗ ಪತ್ರವನ್ನು ನಿಪಿ **13** ಎಂದು, ಸರ್ವೆ ನಕಾಶೆಯನ್ನು ನಿಪಿ **14** ಎಂದು, ದಿನಾಂಕಃ **04.08.1977** ರ ನೊಂದಾಯಿತ ವ್ಯವಸ್ಥಾ ಪತ್ರವನ್ನು ನಿಪಿ **15** ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ**1** ನೇ ಪ್ರತಿವಾದಿ ಪರವಾಗಿ ಶ್ರೀ ಟಿ ಜಿ ವಿ ವಕೀಲರಿಂದಃ-

**1** ನೇ ಪ್ರತಿವಾದಿಯು **5** ನೇ ತರಗತಿ ಓದುತ್ತಿದ್ದಾಗ ನಮ್ಮ ಮನೆಗೆ ಬಂದಿರುತ್ತಾನೆ. ನನ್ನ ಯಜಮಾನರು ಮೃತಪಟ್ಟಾಗ **1** ನೇ ಪ್ರತಿವಾದಿಯೇ ತಿಥಿ ಕಾರ್ಯ ಮಾಡಿದ್ದಾನೆ ಎಂದರೆ ಸರಿಯಲ್ಲ. ನಿಮ್ಮ ಯಜಮಾನರು ಮೃತಪಟ್ಟ ತಲೆಗೋಲು ಓಡೆಯುವುದು, ತಲೆ ಕೂದಲು ತೆಗೆಸುವುದನ್ನು ಯಾರು ಮಾಡಿದ್ದಾರೆ? ಎಂದರೆ **1** ನೇ ಪ್ರತಿವಾದಿಯೇ ಮಾಡಿದ್ದಾನೆ. ಪ್ರತಿವಾದಿಯರೆಲ್ಲಾ ಮೋಸ ಮಾಡಿ ವಿಭಾಗ ಪತ್ರವನ್ನು ಬರೆಸಿಕೊಂಡಿದ್ದಾರೆ ಎಂದು ಹೇಳಿದ್ದು ಈ ಬಗ್ಗೆ ಪೂಲೀಸರಿಗೆ ದೂರು ಕೊಟ್ಟಿದ್ದಿರಾ ಎಂದರೆ ಇಲ್ಲ. ಈ ದೂರು ಕೊಡಲು ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ. **2008** ರ ವಿಭಾಗ ಪತ್ರದಲ್ಲಿ **2** ನೇ ಪ್ರತಿವಾದಿಗೆ ಹೋದ ಭಾಗದಲ್ಲಿ ಮೂರು ಕೋಳಿ ಫಾರಂಗಳು ಇವೆ ಎಂದರೆ ಸರಿ. ಸದರಿ ಕೋಳಿ ಫಾರಂಗಳ ವ್ಯವಹಾರಗಳನ್ನು **2** ನೇಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದಾನೆ ಎಂದರೆ ಸರಿಯಲ್ಲ ನಾವು ಸಹ ನೋಡಿಕೊಳ್ಳುತ್ತಿದ್ದೇವೆ. ನ್ಯೂಟ್ರಿ ಕಂಪನಿಯಿಂದ ಕೋಳಿ ಮರಿ ಕೊಡುತ್ತಾರೆ. ಈ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನಮ್ಮ ಮತ್ತು ಕಂಪನಿ ನಡುವೆ ಆದ ಹಣದ ವ್ಯವಹಾರದ ಬಗ್ಗೆ

ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಕಂಪನಿಯ ಜೊತೆ ನಾನು ಯಾವುದೇ ವ್ಯವಹಾರ ಮಾಡುತ್ತಿಲ್ಲ ಆದರೆ 2 ನೇಪ್ರತಿವಾದಿಯೇ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಎಲ್ಲಾ ಮಾಹಿತಿಯನ್ನು ಪಡೆದುಕೊಂಡು 2008 ರ ವಿಭಾಗ ಪತ್ರವನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶಿಲ್ಪಾ.ಹೆಚ್.ಎ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.